ಬರುವುದೇ ಇಲ್ಲ. ಇದರ ಹಣೆಬರಹ ನಮ್ಮೆಲ್ಲರಿಗೂ ಗೊತ್ತಿದೆ. ಇದು ನಿಮ್ಮೊಬ್ಬರಿಗೇ ಅಲ್ಲ, ಎಲ್ಲರಿಗೂ ಗೊತ್ತಿರುವುದೇ. ಇದರ ಬಗ್ಗೆ ಕ್ಯಾಪಿಂಗ್ ಪ್ಯಾಟ್ರನ್‌ನ್ನು, ಡ್ಯಾಮ್‌ಗಳು ಪೂರ್ಣವಾದ ಮೇಲೆ, ಒಂದುಕಡೆ ಅಲ್ಲ, ಎಲ್ಲಾ ಕಡೆ ಎನ್‌ಫೋರ್ಸ್ ಮಾಡಬೇಕಾಗುತ್ತದೆ. ಸದನದಲ್ಲಿ ಎಲ್ಲರೂ ಕುಳಿತುಕೊಂಡು, ಒಂದು ನಿರ್ಣಯಕ್ಕೆ ಬಂದು ಎನ್‌ಫೋರ್ಸ್ ಮಾಡಬೇಕಾಗುತ್ತದೆ. ನೀರನ್ನು ಯಾರೋ ಒಬ್ಬರು ಉಪಯೋಗ ಮಾಡಿಕೊಂಡು, ಬೇರೆಯವರಿಗೆ ಟೋಪಿ ಹಾಕುವುದಕ್ಕಾಗುವುದಿಲ್ಲ. We may have to take certain radical steps but only thing is that the entire house has to stand together on that issue. ಈಗ ಅನಧಿಕೃತವಾಗಿರುವುದಕ್ಕೆ, ನಾನು ಮುಂದೆ ಮಾನ್ಯ ಮಾಡುತ್ತೇನೆಂದು ಹೇಳುವುದು ಕಷ್ಟವಾಗುತ್ತದೆ. ಈಗಂತು ನೀರು ಬಿಟ್ಟಿದ್ದೇವೆ. ಹಿಂದಿನ ವರ್ಷ ಏನು ಸಹಾಯ ಮಾಡಿದ್ದರೋ, ಅದೇ ಸಹಾಯವನ್ನು ಈ ವರ್ಷವೂ ಮಾಡುತ್ತೇವೆ.

ನಿಯಮ 351ರ ಮೇರೆಗೆ ಚರ್ಚೆ

ವಿಷಯ:- ಬೆಂಗಳೂರು ನಗರದಲ್ಲಿ, ಒಕ್ಕಲೆಬ್ಬಿಸಿ ಬೀದಿ ಪಾಲಾದ ಫಲಾನುಭವಿಗಳಿಗೆ ನಿವೇಶನ ಹಂಚದಿರುವ ಬಗ್ಗೆ.

ಶ್ರೀ ಜಿ.ಎಸ್.ಶಿವನಂಜಪ್ಪ (ಗುಬ್ಬಿ):- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಮಳೆಯಿಂದಾಗಿ, ಮತ್ತು ವಿವಿಧ ಬಡಾವಣೆಗಳ ನಿರ್ಮಾಣಕ್ಕಾಗಿ ಒಕ್ಕಲೆಬ್ಬಿಸಿದಾಗ ಬೀದಿಪಾಲಾದ ಅರ್ಹ ಫಲಾನುಭವಿಗಳ ಪರವಾಗಿ ''ಕರ್ನಾಟಕ ದಲಿತ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಅಪ್ಪುರಾವ್ ಗುಲ್ವಾಡಿಯವರು ಒದಗಿಸಿರುವ ಅನೇಕ ದಾಖಲೆಗಳು ದಿನಾಂಕ : 26-10-93ರಂದು ಇವುಗಳ ಸರ್ಕಾರಕ್ಕೆ ಸೇರಿರುವುದಾಗಿಯೂ ತಾ : 15-2-94ರಲ್ಲಿ ಸದನದಲ್ಲಿ, ಸರ್ಕಾರವು ಒಪ್ಪಿಕೊಂಡಿದ್ದರು ಕೂಡ ಸಮಿತಿಯು ಸಲ್ಲಿಸರುವ 10 ಬೇಡಿಕೆಗಳಲ್ಲಿ ಸುಮಾರು 10,058 ನಿರ್ವಸಿತ ಬಡ ಕುಟುಂಬಗಳಿಗೆ 20 X 30 ಅಳತೆಗೆ ಬದಲೀ ನಿವೇಶನಗಳನ್ನು ಪುನರ್ವಸತಿ ಯೋಜನೆಯಡಿ ಹಂಚದಿರುವ ಬಗ್ಗೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಶೀಘ್ರವಾಗಿ ಇವರುಗಳಿಗೆ ನಿವೇಶನಗಳನ್ನು ಮಂಜೂರ್ಮಾಡುವುದಾಗಿಯೂ ಪುನಃ ತಾ: 15-2-94 ರಲ್ಲಿ ಮತ್ತು 17-2-94 ರಂದು ಕೂಡ ಉಭಯ ಸದನಗಳಲ್ಲಿ ನೀಡಿರುವ ಸರ್ಕಾರದ ಈ ಭರವಸೆಗಳು ಇಂದಿಗೂ ಕಾರ್ಯರೂಪಕ್ಕೆ ಬಾರದೆಯೇ ಇರುವ ಕುರಿತು ಹಾಗೂ ಈ ಪ್ರಕರಣವನ್ನು ಪರಿಗಣಿಸಿ 8 ದಿನಗಳಲ್ಲಿ ಇತ್ಯರ್ಥಗೊಳಿಸುವಂತೆ ಕ್ರಮವಾಗಿ ದಿನಾಂಕ: 15-2-95 ಹಾಗೂ 10-7-95 ಮತ್ತು 13-7-95 ರಂದು ಸ್ವತಃ ಮುಖ್ಯ ಮಂತ್ರಿಯವರೇ ಹೊರಡಿಸಿರುವ ಈ ಆದೇಶಗಳು ಸಹ ಜಾರಿಗೆ ಬಾರದಿರುವ ಕಾರಣ ಸಾರ್ವಜನಿಕ ಮಹತ್ವವಾದ ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಆರ್.ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು):- ಮಾನ್ಯ ಸದಸ್ಯರು ಸೂಚನೆಯಲ್ಲಿ ತಿಳಿಸಿರುವಂತೆ ದಲಿತ ಕ್ರಿಯಾ ಸಮಿತಿಯ ರಾಜ್ಯ ಸಂಚಾಲಕರಾದ ಶ್ರೀ ಅಪ್ಪುರಾವ್ ಗುಲ್ವಾಡಿಯವರು ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ಮನೆ ಕಳೆದುಕೊಂಡವರೆನ್ನಲಾದ ಸುಮಾರು 10,058 ಕೊಳಚೆ ನಿವಾಸಿಗಳಿಗೆ ಪುನರ್ ವಸತಿ ನೀಡುವಂತೆ ಕೋರಿಕೆ ಸಲ್ಲಿಸಿರುವುದು ನಿಜ.

ಜಾರಿಯಲ್ಲಿರುವ ಪ್ರಾಧಿಕಾರದ ಹಂಚಿಕೆ ನಿಯಮಗಳ ಪ್ರಕಾರ ಬಿಡಿನಿವೇಶನಗಳ ಹಂಚಿಕೆ ಹೊರತುಪಡಿಸಿ, ಉಳಿದಂತೆ ಅಧಿಸೂಚನೆ ಹೊರಡಿಸಿ, ಅರ್ಜಿಗಳನ್ನು ಆಹ್ವಾನಿಸಿ, ನಂತರ

ನಿಯಮದಲ್ಲಿ ನಿಗಧಿಪಡಿಸಿರುವ ಪದ್ಧತಿ ಅನುಸರಿಸಿ ನಿವೇಶನಗಳ ಹಂಚಿಕೆ ಮಾಡಬೇಕಾಗುತ್ತದೆ. ಅಧಿಸೂಚನೆ ಇಲ್ಲದೆ ನೇರವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿಲ್ಲ. ಆದಾಗ್ಯೂ ಪ್ರಾಧಿಕಾರವು ಉದಾರ ನೀತಿ ತಳೆದು, ಪ್ರಾಧಿಕಾರದ ಜಾಗದಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವ ಕೊಳಚೆ ನಿವಾಸಿಗಳ ಕೋರಿಕೆ ಮೇರೆಗೆ ಅವರು ವಾಸಿಸುತ್ತಿರುವ ನಿವೇಶನಗಳನ್ನು ಸಕ್ರಮಗೊಳಿಸುವ ನೀತಿ ಪಾಲಿಸುತ್ತಾ ಬಂದಿದೆ. ಹೀಗೆ ಅನಧಿಕೃತವಾಗಿ ವಾಸಿಸುತ್ತಿರುವ ಜಾಗ ಸಾರ್ವಜನಿಕ ಉದ್ದೇಶಗಳಿಗೆ ಬೇಕಾದಾಗ, ಅಂದರೆ ರಸ್ತೆ, ಪಾರ್ಕ್, ಇತ್ಯಾದಿ ಉದ್ದೇಶಗಳಿಗೆ ಬೇಕಾದಾಗ ಪ್ರಾಧಿಕಾರವು ಅಂತಹ ನಿವಾಸಿಗಳಿಗೆ ಬೇರೆ ಕಡೆ ಪುನರ್ ವಸತಿ ಒದಗಿಸುವ ವ್ಯವಸ್ಥೆ ಸಹ ಮಾಡಿದೆ. ಈ ರೀತಿ ಪ್ರಾಧಿಕಾರವು ಈವರೆಗೆ 15,017 ಅನಧಿಕೃತ ನಿವಾಸಿಗಳಿಗೆ (ಸ್ಲಂ ನಿವಾಸಿಗಳಿಗೆ) ವಾಸವಾಗಿರುವಲ್ಲೇ ಸಕ್ರಮಗೊಳಿಸಿದೆ. ಸಾರ್ವಜನಿಕ ಸೌಕರ್ಯ ಕಲ್ಪಿಸುವ ದಿಸೆಯಲ್ಲಿ ಸ್ಲಂ ನಿವಾಸಿಗಳನ್ನು ತೆರವು ಮಾಡಿಸಿದ ಸುಮಾರು 5076 ನಿವಾಸಿಗಳಿಗೆ ಬೇರೆ ಕಡೆ ಪುನರ್ ವಸತಿ ಒದಗಿಸಿದೆ. ಈ ರೀತಿ ಪುನರ್‌ವಸತಿ ಒದಗಿಸುವಾಗ ನಿವಾಸಿಗಳನ್ನು ಸರ್ವೆ ಮಾಡಿ ಗುರುತಿಸಿ ಆಥವಾ ರೇಷನ್ ಕಾರ್ಡ್, ಓಟರ್ ಲಿಸ್ಟ್ ತೆರವು ಮಾಡಿಸಲು ಕೊಟ್ಟ ನೋಟೀಸ್ ಇತ್ಯಾದಿಗಳ ಆಧಾರದ ಮೇಲೆ ಅವರುಗಳು ಅಲ್ಲಿ ವಾಸವಾಗಿದ್ದರೆಂಬುದನ್ನು ಧೃಡಪಡಿಸಿಕೊಂಡು ಪುನರ್ ವಸತಿ ಮಾಡಲಾಗಿದೆ. ಮೋಸದ ಪ್ರಕರಣಗಳನ್ನು ತಡೆಗಟ್ಟಲು ಈ ರೀತಿ ದಾಖಲಾತಿಗಳ ಆಧಾರದ ಮೇಲೆ ಪುನರ್ ವಸತಿ ಒದಗಿಸುವ ಅವಶ್ಯಕತೆಯಿದೆ. ಇದರ ಜೊತೆಗೆ ಪ್ರಾಧಿಕಾರದ ಅಧಿಕಾರಿಗಳ ಮುಖಾಂತರ ಸ್ಥಳೀಯ ವಿಚಾರಣೆ ಮಾಡಿ ಮಹಜರ್ ಮಾಡಿಸಿ ಗುರುತಿಸುವ ಪದ್ಧತಿ ಕೂಡ ಅನುಸರಿಸಲಾಗುತ್ತಿದೆ.

ಶ್ರೀ ಅಪ್ಪುರಾವ್ ಗುಲ್ವಾಡಿಯವರು ಸಲ್ಲಿಸಿರುವ 10 ಪ್ರಕರಣಗಳ ಪೈಕಿ 6 ಪ್ರಕರಣಗಳು ಮಾತ್ರ ವಾಸ ಮಾಡುತ್ತಿದ್ದ ಗುಡಿಸಲುಗಳನ್ನು ನೆಲಸಮಗೊಳಿಸಿದ ಕಾರಣ ಪುನರ್ ವಸತಿ ಒದಗಿಸಬೇಕೆನ್ನುವ ಕೋರಿಕೆಯಾಗಿದೆ. ಇವುಗಳ ಪೈಕಿ ಮಿಲ್ಲರ್ ಟ್ಯಾಂಕ್ ಬಳಿ ಇದ್ದವರನ್ನು ತೆರವು ಮಾಡಿಸುವಾಗ ಪ್ರಾಧಿಕಾರ ಮತ್ತು ಬೆಂಗಳೂರು ನಗರ ಪಾಲಿಕೆ ಜಂಟಿಯಾಗಿ ಸರ್ವೆ ಮಾಡಿ ನಿವಾಸಿಗಳನ್ನು ಗುರ್ತಿಸಿ 1326 ನಿವಾಸಿಗಳ ಪಟ್ಟಿ ತಯಾರಿಸಿ ಇವರಿಗೆ ಲಿಂಗರಾಜಪುರದಲ್ಲಿ ಪುನರ್ ವಸತಿ ಒದಗಿಸಿದೆ. ಹೀಗೆ ಪಟ್ಟಿ ತಯಾರಿಸಿದಾಗ ಯಾರನ್ನೂ ಕೈಬಿಟ್ಟ ಬಗ್ಗೆ ಮಾಹಿತಿ ಇಲ್ಲ. ಆದ್ದರಿಂದ ಪ್ರಾಧಿಕಾರವು ಶ್ರೀ ಗುಲ್ವಾಡಿಯವರ ಕೋರಿಕೆ ತಿರಸ್ಕರಿಸಿ ಅವರಿಗೆ ಹಿಂಬರಹ ನೀಡಿದೆ. ಉಳಿದ ಪ್ರಕರಣಗಳಲ್ಲಿ ಶ್ರೀ ಗುಲ್ವಾಡಿಯವರು ಒದಗಿಸಿದ ದಾಖಲಾತಿ ಪರಿಶೀಲಿಸಿ ಅವರು ನೀಡಿರುವ ಪಟ್ಟಿಯಲ್ಲಿನ ಜನರು ಅಲ್ಲಿ ಹಿಂದೆ ವಾಸವಾಗಿದ್ದರೆಂಬ ಬಗ್ಗೆ ಅಲ್ಲಿಂದ ತೆರವು ಮಾಡಿಸಲಾಗಿತ್ತೆಂಬ ಬಗ್ಗೆ ಯಾವುದೇ ಪುರಾವೆ, ದಾಖಲಾತಿ ಸಾಕ್ಷ್ಯಾಧಾರಗಳು ಇರುವುದಿಲ್ಲದಿರುವುದು ಕಂಡು ಬಂದ ನಂತರ ಅವರ ಕೋರಿಕೆ ತಿರಸ್ಕರಿಸಿ ಹಿಂಬರಹ ನೀಡಿದೆ. ಜೆ.ಪಿ.ನಗರ 4 ನೇ ಹಂತದ ಸಾರಕ್ಕಿ ಕೆರೆಯಲ್ಲಿ ಮನೆಗಳನ್ನು ತೆರವು ಮಾಡಿಸಿದೆನ್ನಲಾದ ಪ್ರಕರಣದಲ್ಲಿ ಮಾತ್ರ ಇವರು ಕೊಟ್ಟಿರುವ ದಾಖಲಾತಿಗಳನ್ನು ಸ್ಥಳೀಯ ತನಿಖೆ ಮಾಡಿಸಿ ಪರಿಶೀಲಿಸಲಾಗುತ್ತಿದೆ. ಶ್ರೀ ಅಪ್ಪುರಾವ್ ಗುಲ್ವಾಡಿಯವರಿಗೆ ಅವರ ಕೋರಿಕೆ ತಿರಸ್ಕರಿಸಿ ಹಿಂಬರಹ ನೀಡಿದ ನಂತರ ಪುನಃ ಕೆಲವು ದಾಖಲಾತಿಗಳನ್ನು ಕೊಟ್ಟಿದ್ದು ಅವುಗಳನ್ನು ಪರಿಶೀಲಿಸಲಾಗಿ ಅವರ ಅರ್ಜಿಗಳಲ್ಲಿ ತಿಳಿಸಿರುವ ಜನರು ಹಿಂದೆ ಸ್ಲಂನಲ್ಲಿ ವಾಸವಾಗಿದ್ದು ನಂತರ ನಿರ್ವಸಿತರಾದ ಬಗ್ಗೆ ಯಾವುದೇ ಹೊಸ ದಾಖಲಾತಿ ನೀಡಿರುವುದಿಲ್ಲ.

ಪುನರ್ ವಸತಿಗೆ ಸಂಬಂಧಿಸದೇ ಇರುವ ಇತರೇ ಪ್ರಕರಣಗಳನ್ನು ಪರಿಗಣಿಸಲು ಹಂಚಿಕೆ ನಿಯಮಗಳಲ್ಲಿ ಅವಕಾಶವಿಲ್ಲದ್ದರಿಂದ ಶ್ರೀ ಗುಲ್ವಾಡಿಯವರ ಕೋರಿಕೆ ತಿರಸ್ಕರಿಸಲಾಗಿದೆ.

ಶ್ರೀ ಅಪ್ಪುರಾವ್ ಗುಲ್ವಾಡಿಯವರು ಅವರ ಮನವಿಯನ್ನು ತಿರಸ್ಕರಿಸಿ ಹಿಂಬರಹ ನೀಡಿದ ನಂತರವೂ ಮಾನ್ಯ ಮುಖ್ಯ ಮಂತ್ರಿಯವರಿಗೆ ಹಲವಾರು ಮನವಿಗಳನ್ನು ಸಲ್ಲಿಸಿದ್ದು ಈ ಮನವಿಗಳಲ್ಲಿ ಯಾವುದೇ ಹೊಸ ಪುರಾವೆ, ಸಾಕ್ಷ್ಯಾಧಾರಗಳನ್ನು ನೀಡದಿದ್ದ ಕಾರಣದಿಂದ ಅವರ ಮನವಿಯನ್ನು ಪರಿಗಣಿಸಲಾಗಿರುವುದಿಲ್ಲ.

ಶ್ರೀ ಜಿ.ಎಸ್.ಶಿವನಂಜಪ್ಪ:- ಈ ಡಾಕ್ಯುಮೆಂಟ್ಸ್‌ಗಳನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಡುತ್ತಿದ್ದೇನೆ.

(2) ವಿಷಯ: ಕನ್ನಡ ನಿಘಂಟು ಸಂಪಾದಕ ಸಮಿತಿಯು ಮಾಡಿರುವ ನಿರ್ಣಯ ಮತ್ತು ರಾಜ್ಯ ಸರ್ಕಾರದ 4-9-91 ರ ಪತ್ರದ ವಿವರ.

ಡಾ॥ ಎಂ.ಪಿ.ಕರ್ಕಿ:- ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಮೇರೆಗೆ, ಕನ್ನಡ ನಿಘಂಟು ಸಂಪಾದಕ ಸಮಿತಿಯು ಮಾಡಿರುವ ನಿರ್ಣಯ ಮತ್ತು ರಾಜ್ಯ ಸರ್ಕಾರದ ಪತ್ರದ ಸಂಖ್ಯೆ: ವಾಪ್ರಾಯು 304 ಕಸದ 90 (ಭಾಗ-11) ತಾ:4-9-91 ರ ಸಲಹೆಗಳು ಯಾವುವು, ಇವುಗಳನ್ನು ಸಂಬಂಧಪಟ್ಟವರು ಅನುಷ್ಠಾನಕ್ಕೆ ತಂದಿದ್ದಾರೆಯೇ ಹಾಗಿದ್ದರೆ, ಮೇಲ್ಕಂಡ ಪತ್ರದ ಪ್ರತಿಯನ್ನು ಒದಗಿಸಲು ಕೋರಲಾಗಿದೆ.

ಶ್ರೀಮತಿ ಬಿ.ಟಿ.ಲಲಿತಾನಾಯಕ್(ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):- ಕನ್ನಡ ಸಾಹಿತ್ಯ ಪರಿಷತ್‌ನ ಕನ್ನಡ ನಿಘಂಟು ಸಂಪಾದಕ ಸಮಿತಿ 1990 ರ ಜನವರಿ 11, 12 ಮತ್ತು 13 ನೇ ದಿನಾಂಕದಂದು ನಡೆದ ಸಭೆಯಲ್ಲಿ ಬಹುಕಾಲದಿಂದ ನೆನೆಗುದಿಗೆ ಬಿದ್ದಿರುವ ಸಿಬ್ಬಂದಿ ವರ್ಗದವರ ಖಾಯಂ ಮಾಡಿ ಶೀಘ್ರ ನಿವೃತ್ತಿ ಆತಂಕ ಸಂಬಳ ಸಾರಿಗೆ ಮುಂತಾದ ಸೌಲಭ್ಯಗಳನ್ನು ಪರಿಹಾರವಾಗುವವರೆಗೆ ಅವರಿಂದ ಅಪೇಕ್ಷಣೀಯವಾದ ನೆರವು ನಿಘಂಟು ಸಮಿತಿಯ ಅಧ್ಯಕ್ಷರಿಗೆ ಹಾಗೂ ಸಮಿತಿ ಅಧ್ಯಕ್ಷರಿಗೆ ಹಾಗೂ ಸಮಿತಿಯ ಸದಸ್ಯರಿಗೆ ತರುವುದು ಅಸಂಬದ್ಧವೆಂದೂ, ಸಿಬ್ಬಂದಿ ವರ್ಗದವರ ಸೇವಾ ನಿಯಮ ಮತ್ತು ಸಂಬಳ ಸಾರಿಗೆ ಸೌಲಭ್ಯಗಳು ಸಮಾಧಾನಕರವಾಗಿಲ್ಲವೆಂದೂ ಮತ್ತು ಅವರಿಗೆ ಅನ್ಯಾಯವಾಗಿದೆ ಎಂದು ನಿಘಂಟು ಸಂಪಾದಕ ಸಮಿತಿಗೆ ಪೂರ್ಣವಾಗಿ ಮನವರಿಕೆಯಾಗಿದೆ ಎಂದು ಇಂತಹ ಪರಿಸ್ಥಿತಿಯು ಮುಂದುವರಿದಷ್ಟು ಕಾಲವು ನಿಘಂಟು ಸಂಪಾದಕ ಸಮಿತಿ ಸಭೆ ನಡೆಯುವುದು ಪ್ರಯೋಜನಕಾರಿಯಾಗುವುದಿಲ್ಲವೆಂದು ಸದಸ್ಯರ ಭಾವನೆಯಾಗಿದೆ ಎಂದೂ, ಆದುದರಿಂದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ನಿಘಂಟು ಸಮಿತಿಯ ಅಧ್ಯಕ್ಷರು ಪರಸ್ಪರವಾಗಿ ಆಲೋಚಿಸಿ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವಿಷದವಾಗಿ ಚರ್ಚಿಸಿ ನಿಘಂಟು ಯೋಜನೆ ಕಾರ್ಯವು ಸುಸೂತ್ರವಾಗಿ ನಡೆಯುವುದಕ್ಕೆ ಸೂಕ್ತ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ಸಂಪಾದಕ ಸಮಿತಿಯು ಕಳಕಳಿಯಿಂದ ಒತ್ತಾಯಿಸಿದೆ'' ಎಂದು ನಿರ್ಣಯ ತೆಗೆದುಕೊಂಡಿತ್ತು.

ಶ್ರೀ ಹೆಚ್.ಸಿ.ಶಾಂತವೀರಯ್ಯ, ಉಪಸಂಪಾದಕರು ಕನ್ನಡ ಕನ್ನಡ ನಿಘಂಟು ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದು 55 ವರ್ಷ ಮುಗಿದ ನಂತರ ದಿನಾಂಕ 30-6-89ರಂದು ಕನ್ನಡ ಸಾಹಿತ್ಯ ಪರಿಷತ್‌ನವರು ಅವರನ್ನು ನಿವೃತ್ತಿಗೊಳಿಸಿದರು. ಈ ಯೋಜನೆಯಲ್ಲಿ ಶ್ರೀಮತಿ ಮಂಜುಳಾರಾವ್ ಮತ್ತು ಶ್ರೀಮತಿ ಎಂ.ಎನ್.ಜಾನಕಮ್ಮ ಇವರಿಬ್ಬರೂ 55 ವರ್ಷ ಮುಗಿದಿದ್ದರೂ ಅವರನ್ನು ಮುಂದುವರಿಸಲಾಗಿದೆ ಹಾಗೂ ಸರ್ಕಾರಿ ನಿಯಮಗಳ ಪ್ರಕಾರ 58 ವರ್ಷಗಳವರೆಗೆ ನಿವೃತ್ತಿ ವಯಸ್ಸು ಇರುವುದರಿಂದ ಶ್ರೀ ಹೆಚ್.ಸಿ.ಶಾಂತವೀರಯ್ಯ ಅವರನ್ನು ಪುನಃ ಸೇವೆಗೆ ತೆಗೆದುಕೊಂಡು